# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಮಿತಿ- ವಾರ್ಡ್ ಸಂಖ್ಯೆ:93, ವಸಂತನಗರ

ದಿನಾಂಕ: 07-06-2021

ಸಂಖ್ಯೆ: ವಾಡ್-93/ ಸ.ಸ/ಪಿ.ಆರ್/ /21-22

## ಕಾರಣಕೇಳಿ ನೋಟಿಸ್

ರವರಿಗೆ

ಶ್ರೀ.ನವೀನ್‌ಕುಮಾರ್
ಆರೋಗ್ಯ ವೈದಾಧಿಕಾರಿಗಳು
ಶಿವಾಜಿನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು-560051.

ವಿಷಯ: ವಾರ್ಡ್ ಸಮಿತಿ ಸಭೆಗೆ ಗೈರುಹಾಜರಾಗುತ್ತಿರುವ ಬಗ್ಗೆ.

************

ವಾರ್ಡ್ ಸಂಖ್ಯೆ:93 ವಸತಂನಗರ ವಾರ್ಡ್ ಕಛೇರಿಯಲ್ಲಿ ಮೊದಲನೇ ಮತ್ತು ಮೂರನೇ ಶನಿವಾರಗಳಂದು ವಾರ್ಡ್ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದೆ ಮುಂದುವರೆದು ಕೋವಿಡ್-19 ರ ಸಂಬಂಧ WDC ಸಭೆಗಳನ್ನು ಸಮಿತಿಯ ಸದಸ್ಯರ ಕೋರಿಕೆಯಂತೆ ಕರೆಯಲಾಗುತ್ತಿರುತ್ತದೆ. ಪ್ರಸ್ತುತ ವಾರ್ಡ್‌ನ ಹಲವು ಕೋವಿಡ್-19 ಸಂಬಂಧಿತ ವಿಷಯಗಳನ್ನು ಸಮಿತಿ ಸದಸ್ಯರು ಸಭೆಯಲ್ಲಿ ಚರ್ಚಿಸಿರುತ್ತಾರೆ. ಈ ಸಂಬಂಧ ತಮ್ಮುವತಿಯಿಂದ ಅಗತ್ಯ ಮಾಹಿತಿಯನ್ನು ಒದಗಿಸಬೇಕಾಗಿರುತ್ತದೆ. ZOOM Call ಮೀಟಿಂಗ್‌ಗಳಿಗೂ ಸಹ ಭಾಗವಹಿಸುತ್ತಿಲ್ಲ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಗೈರುಹಾಜರಾದ ಬಗ್ಗೆ 3 ದಿನಗಳಲ್ಲಿ ಉತ್ತರ ನೀಡುವುದು. ತಪ್ಪಿದ್ದಲ್ಲಿ ಮಾನ್ಯ ಮುಖ್ಯ ಆಯುಕ್ತರು ಬಿ.ಬಿಎಂ.ಪಿ ರವರಲ್ಲಿ ವಿಷಯವನ್ನು ಸಲ್ಲಿಸಲಾಗುವುದು.

R. Manjula (signature) 19/6/2021

ನೋಡೆಲ್ ಅಧಿಕಾರಿಗಳು,
ವಾರ್ಡ್ ಸಮಿತಿ ಸಭೆ
ವಾರ್ಡ್-93 ವಸಂತನಗರ
ಬಿಬಿಎಂಪಿ, ಬೆಂಗಳೂರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ಸಮಿತಿ- ವಾರ್ಡ್ ಸಂಖ್ಯೆ:93, ವಸಂತನಗರ**

ಸಂಖ್ಯೆ: ವಾಡ್-93/ ಸ.ಸ/ಪಿ.ಆರ್/ /21-22 ದಿನಾಂಕ: 19-06-2021

**ಕಾರಣಕೇಳಿ ನೋಟಿಸ್**

ರವರಿಗೆ

ಶ್ರೀ.ನವೀನ್‌ಕುಮಾರ್
ಆರೋಗ್ಯ ವೈದಾಧಿಕಾರಿಗಳು
ಶಿವಾಜಿನಗರ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು-560051.

**ವಿಷಯ:** ವಾರ್ಡ್ ಸಮಿತಿ ಸಭೆಗೆ ಗೈರುಹಾಜರಾಗುತ್ತಿರುವ ಬಗ್ಗೆ.

************

ವಾರ್ಡ್ ಸಂಖ್ಯೆ:93 ವಸತಂನಗರ ವಾರ್ಡ್ ಕಛೇರಿಯಲ್ಲಿ ಮೊದಲನೇ ಮತ್ತು ಮೂರನೇ ಶನಿವಾರಗಳಂದು ವಾರ್ಡ್ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದೆ ಮುಂದುವರೆದು ಕೋವಿಡ್-19 ರ ಸಂಬಂಧ WDC ಸಭೆಗಳನ್ನು ಸಮಿತಿಯ ಸದಸ್ಯರ ಕೋರಿಕೆಯಂತೆ ಕರೆಯಲಾಗುತ್ತಿರುತ್ತದೆ. ಪ್ರಸ್ತುತ ವಾರ್ಡ್‌ನ ಹಲವು ಕೋವಿಡ್-19 ಸಂಬಂಧಿತ ವಿಷಯಗಳನ್ನು ಸಮಿತಿ ಸದಸ್ಯರು ಸಭೆಯಲ್ಲಿ ಚರ್ಚಿಸಿರುತ್ತಾರೆ. ಈ ಸಂಬಂಧ ತಮ್ಮವತಿಯಿಂದ ಅಗತ್ಯ ಮಾಹಿತಿಯನ್ನು ಒದಗಿಸಬೇಕಾಗಿರುತ್ತದೆ. ZOOM Call ಮೀಟಿಂಗ್‌ಗಳಿಗೂ ಸಹ ಭಾಗವಹಿಸುತ್ತಿಲ್ಲ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಗೈರುಹಾಜರಾದ ಬಗ್ಗೆ 3 ದಿನಗಳಲ್ಲಿ ಉತ್ತರ ನೀಡುವುದು, ತಪ್ಪಿದ್ದಲ್ಲಿ ಮಾನ್ಯ ಮುಖ್ಯ ಆಯುಕ್ತರು ಬಿ.ಬಿಎಂ.ಪಿ ರವರಲ್ಲಿ ವಿಷಯವನ್ನು ಸಲ್ಲಿಸಲಾಗುವುದು.

R. Manjula... 19/6/2021
ನೋಡೆಲ್ ಅಧಿಕಾರಿಗಳು,
ವಾರ್ಡ್ ಸಮಿತಿ ಸಭೆ
ವಾರ್ಡ್-93 ವಸಂತನಗರ
ಬಿಬಿಎಂಪಿ, ಬೆಂಗಳೂರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ವಾರ್ಡ್ 93, ವಸಂತನಗರ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 17-05-2021 ರಂದು ಬೆಳಿಗ್ಗೆ 11.00 ಗಂಟೆಗೆ, ನೋಡಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ ರವರ ಆದೇಶದಂತೆ, ವಸಂತನಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಅಧ್ಯಕ್ಷತೆಯಲ್ಲಿ ನಡೆಸಲಾದ ವಾರ್ಡ್ ಸಮಿತಿಯ ಸಭೆಯ ನಡಾವಳಿ:-

ಈ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳ ವಿವರಗಳು

| ಕ್ರ.ಸಂ | ಹೆಸರು | ಸಮಿತಿ ಸಭೆಯ |
|---|---|---|
| 1 | ಶ್ರೀಮತಿ. ಆರ್. ಮಂಜುಳಮ್ಮ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ | ನೋಡಲ್ ಅಧಿಕಾರಿಗಳು |
| 2 | ಶ್ರೀ. ರಾಜ್ ದುಗ್ಗಾರ್ | ಸಮಿತಿ ಸದಸ್ಯರು |
| 3 | ಶ್ರೀಮತಿ ಚಿತ್ರ ವೆಂಕಟೇಶ್ | ಸಮಿತಿ ಸದಸ್ಯರು |
| 4 | ಶ್ರೀಮತಿ. ಪ್ರಿಯಚೆಟ್ಟಿ ರಾಜ್ ಗೋಪಾಲ್ | ಸಮಿತಿ ಸದಸ್ಯರು |
| 5 | ಶ್ರೀ ಭಾನು ಪ್ರಕಾಶ್ | ಸಮಿತಿ ಸದಸ್ಯರು |
| 6 | ಶ್ರೀ. ಕೀರ್ತಿ | ಮಾರ್ಷಲ್ |
| 7 | ಶ್ರೀಮತಿ ಪುಷ್ಪ | ಕಂದಾಯ ನಿರೀಕ್ಷಕರು |
| 8 | ಶ್ರೀಮತಿ ಮಂಜುಳ | ತೋಟಗಾರಿಕೆ |
| | <u>ಗೈರುಹಾಜರಾದವರು</u> | |
| 01 | ಪ್ರಕಾಶ್‌ಚಂದ್ ಪಿರಿಗಲ್ | ಸಮಿತಿ ಸದಸ್ಯರು |
| 02 | ಶ್ರೀಮತಿ ಜನನಿ | ಸಮಿತಿ ಸದಸ್ಯರು |
| 03 | ಶ್ರೀ ವಾಸು | ಕಾರ್ಯಪಾಲಕ ಅಭಿಯಂತರರು |
| 04 | ಶ್ರೀ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 05 | ಶ್ರೀ ನವೀನ್ ಕುಮಾರ್ | MOH |
| 06 | ಶ್ರೀ ಶ್ರೀನಿವಾಸ್ | ಸಹಾಯಕ ಅಭಿಯಂತರರು ಮೇಜರ್ ರೋಡ್ |
| 07 | ಲಿಂಗಯ್ಯ ಕೆ.ಬಿ ಬಸವರಾಜ್ | ಸಹಾಯಕ ಕಂದಾಯ ಅಧಿಕಾರಿಗಳು |
| 08 | ಶ್ರೀ ಮೂರ್ತಿ | ಕಂದಾಯ ವಸೂಲಿಗಾರರು |
| 09 | ಶ್ರೀ ಜಯರಾಜ್ | ಪರಿವೀಕ್ಷಕರು |

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಶ್ರೀಮತಿ ಆರ್ ಮಂಜುಳಮ್ಮ ತಹಶೀಲ್ದಾರ್ (ಚುನಾವಣೆ) ರವರು ಸಭೆಗೆ ತಿಳಿಸುತ್ತಾ ಶ್ರೀ ರಾಜಶೇಖರ್‌ಮೂರ್ತಿ ಹೊರತುಪಡಿಸಿ ಬೇರೆ ಯಾವುದೇ ಅಧಿಕಾರಿಗಳು ಸಭೆಗೆ ಹಾಜರಿರುವುದಿಲ್ಲ ಪ್ರಯುಕ್ತ ಹೊಸದಾಗಿ ಚರ್ಚಿಸುವಂತಹ ವಿಷಯಗಳು ಇದ್ದಲ್ಲಿ ಚರ್ಚಿಸಬಹುದೆಂದು ಸದಸ್ಯರಲ್ಲಿ ತಿಳಿಸಿದರು.

ಸಮಿತಿ ಸದಸ್ಯರು ಶ್ರೀಮತಿ ಚಿತ್ರ ವೆಂಕಟೇಶ್ ರವರು ಕುಮಾರ ಪಾರ್ಕ್ ವೆಸ್ಟ್ ಭಾಗದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಳ್ಳಲು ತಿಳಿಸಿದರು. ಕೋವಿಡ್‌ಗೆ ಸಂಬಂಧಿಸಿದಂತೆ ಸಾಮಾಜಿಕ ಅಂತರ ಕಾಯ್ದು ಕೊಳ್ಳದೆ ಜನರು ಮನಸೋ ಇಚ್ಛೆ ಓಡಾಡುತ್ತಿರುತ್ತಾರೆ. ರಾತ್ರಿ 9:00 ಗಂಟೆ ನಂತರ ಕುಮಾರ ಪಾರ್ಕ್ ಪಶ್ಚಿಮ ಭಾಗದಲ್ಲಿ ಇರುವ ಕಲ್ಯಾಣ ಮಂಟಪ ಸುತ್ತಮುತ್ತಾ ಡ್ರಗ್ ಮತ್ತು ಡ್ರಿಂಕ್ಸ್ ಮಾಡುತ್ತಿರುವ ಗುಂಪುಗಳು ಕಂಡುಬರುತ್ತಿದೆ. ಮಾರ್ಷಲ್ ರವರು ಸದರಿ ಜಾಗಕ್ಕೆ ಭೇಟಿ ನೀಡಿ ಪುಂಡರ ಗುಂಪನ್ನು ಚದುರಿಸಲು ಸೂಚಿಸಿದರು.

ಶ್ರೀ ಕೀರ್ತಿ, ಮಾರ್ಷಲ್‌ರವರು ಕೋವಿಡ್‌ಗೆ ಸಂಬಂಧಿಸಿದಂತೆ ಸಾಮಾಜಿಕ ಅಂತರ ಕಾಯ್ದು ಕೊಳ್ಳಲು ಜನರಿಗೆ ಮಾರ್ಗದರ್ಶನ ನೀಡುತ್ತಿರುವುದಾಗಿ ತಿಳಿಸಿದರು. ಕಲ್ಯಾಣ ಮಂಟಪ ಸುತ್ತಮುತ್ತಾ ಡ್ರಗ್ ಮತ್ತು ಡ್ರಿಂಕ್ಸ್ ಮಾಡುತ್ತಿರುವ ಗುಂಪುಗಳ ಬಗ್ಗೆ ಕ್ರಮ ಜರುಗಿಸಲು ಪೊಲೀಸ್ ಸಹಾಯದ ಅವಶ್ಯಕತೆ ಇರುತ್ತದೆ. ಪ್ರಯುಕ್ತ ಪೋಲಿಸರಿಗೆ ಈ ಬಗ್ಗೆ ಮಾಹಿತಿ ನೀಡಲು ಸಭೆಯನ್ನು ಕೋರಿದರು. ಶ್ರೀಮತಿ ಚಿತ್ರ ವೆಂಕಟೇಶ್ ರವರು ಪೊಲೀಸರ ಸಹಾಯ ಒದಗಿಸುವುದಾಗಿ ಶ್ರೀ ಕೀರ್ತಿ, ಮಾರ್ಷಲ್ ಇವರಿಗೆ ಬರವಸೆ ನೀಡಿದರು.

ರಾಜ್ ದುಗ್ಗಾರ್ ರವರು ಮಸ್‌ಜೀದ್ ರೋಡ್ ವಸಂತನಗರ ರಸ್ತೆ ಮಧ್ಯದಲ್ಲಿ ಕಲ್ಲನ್ನು ಹಾಕಿರುತ್ತಾರೆ, ಸದರಿ ಲ್ಲನ್ನು ತೆರೆವುಗೊಳಿಸುವ ಬಗ್ಗೆ ರಾಜ್ ಶೇಖರ್ ಮೂರ್ತಿ ಇವರಿಗೆ ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಾಜ್‌ಶೇಖರ್‌ಮೂರ್ತಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮತಿ. ಪ್ರಿಯಚೆಟ್ಟಿ ರಾಜ್‌ಗೋಪಾಲ್‌ರವರು ಅತೀ ವೇದನೆಯಿಂದ ವಿಷಯಗಳನ್ನು ಚರ್ಚಿಸಿದರು ಹಾಗೂ ನೋಡಲ್ ಧಿಕಾರಿಗಳು ಪ್ರಿಯಾಚೆಟ್ಟಿರವರು ಮಾತಿನ ತೀವ್ರತೆಯನ್ನು ವಿಷಾದಿಂದ ಆಲಿಸಿದರು.

ಶ್ರೀ ನವೀನ್‌ಕುಮಾರ್ MOH ಇವರು ಪ್ರತಿ ವಾರ್ಡ್ ಕಮಿಟಿ ಸಭೆಗೆ ಹಾಜರಿರುವುದಿಲ್ಲ ಹಾಗೂ ನೋಡಲ್ ಧಿಕಾರಿಗಳು ದೂರವಾಣಿ ಮೂಲಕ ಸಂಪರ್ಕಿಸಿ ಸಭೆಯಲ್ಲಿ ಕೋವಿಡ್–19ಗೆ ಸಂಬಂಧಿಸಿದಂತೆ ಸಮಿತಿ ಸದಸ್ಯರು ನೇಕ ಪ್ರಶ್ನೆಗಳನ್ನು ಹಾಗೂ ಮಾಹಿತಿಯನ್ನು ಕೇಳುವ ಸಂಭವವಿರುತ್ತದೆ, ಪ್ರಯುಕ್ತ ಸಭೆಗೆ ಹಾಜರಾಗಿ ಎಂದು ಾಚಿಸಿದರು. ಪ್ರತಿ ಸಭೆಯ ದಿನವೂ ಏನಾದರೊಂದು ಸಬೂಬನ್ನು ಹೇಳುತ್ತಾ ಗೈರು ಹಾಜರಾಗಿರುತ್ತಾರೆ ಹಾಗೂ ರ್ಕಾರದ ಅಧಿಸೂಚನೆ ನಂ.ಆರಡಿ/158/ಟಿಎನ್‌ಆರ್ 2020(1) ದಿನಾಂಕ 07–05–2021 ರಂತೆ ವಾರ್ಡ್‌ವಾರು ರ್‌ರೂಂ ಮತ್ತು Triage Center ತೆರೆಯಲು ಸೂಚಿಸಿರುವ ಹಿನ್ನಲೆಯಲ್ಲಿ ವಾರ್ಡ್–93ಗೆ ಸಂಬಂಧಿಸಿದಂತೆ ೋಜನಾ ವರದಿಯನ್ನು ಸಿದ್ದಪಡಿಸಲು 15–05–2021ರಂದು ಜ್ಞಾಪನವನ್ನು ನೀಡಲಾಗಿತ್ತು. ಸದರಿ ವಿಷಯದ ಕುರಿತು ೊಂಡ ಕ್ರಮದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ, ಪ್ರಯುಕ್ತ ಶ್ರೀ. ನವೀನ್ ಕುಮಾರ್ MOH ಇವರಿಗೆ ೋಟೀಸ್ ನೀಡುವಂತೆ ಶ್ರೀ ರಾಜ್‌ಶೇಖರ್‌ಮೂರ್ತಿರವರಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

ಸಮಿತಿ ಸದಸ್ಯರು ಮುಂದಿನ ಸಭೆಯಲ್ಲಿ ಶ್ರೀ ನವೀನ್‌ಕುಮಾರ್ ಕಡ್ಡಾಯವಾಗಿ ಸಭೆಗೆ ಹಾಜರಿದ್ದು ಕೋವಿಡ್– ಗೆ ಸಂಬಂಧಿಸಿದಂತೆ ವಿವರಗಳನ್ನು ನೀಡುವಂತೆ ಸೂಚಿಸಲು ನೋಡಲ್ ಅಧಿಕಾರಿರವರಿಗೆ ತಿಳಿಸಿದರು.

ಶ್ರೀಮತಿ ಪುಷ್ಪ, ಕಂದಾಯ ನೀರೀಕ್ಷಕರು ಕೋವಿಡ್–19 ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ನವೀನ್ ಕುಮಾರ್ MOH ಇವರಿಂದ ಪಡೆಯಬಹುದಾಗಿದೆಂದು ಸಭೆಗೆ ಸೂಚಿಸಿದರು.

ಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

R. Manjulamma
ನೋಡಲ್ ಅಧಿಕಾರಿಗಳು
ವಾರ್ಡ್– 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸದಸ್ಯ ಕಾರ್ಯದರ್ಶಿಗಳು
ವಾರ್ಡ್– 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ತ್ಯು:–

ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
ಮಾನ್ಯ ವಲಯ ಆಯುಕ್ತರು(ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
ಮಾನ್ಯ ಜಂಟಿ ಆಯುಕ್ತರು (ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
ಕಛೇರಿ ಕಡತಕ್ಕೆ.